(ಇಂದು ದಿಃ 21-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

<u>ಪಾಟೀ ಸವಾಲುಃ- ವಾದಿ ಪರ ಶ್ರೀ.LSJ ವಕೀಲರಿಂದಃ-</u>

ದಾವೆ ಸರ್ವೇ ನಂಬರ 47. ವಿಸ್ತಿರ್ಣ 8 ಎಕರೆ 9 ಗುಂಟೆ ಇದೆ. ವಾದಿ ಈ ದಾವೆಯನ್ನು ಪೀತ್ರಾರ್ಜಿತ ಆಸ್ತಿಗೆ ಹಾಕಿದ್ದಾರೆ ಎಂದರೆ ಸರಿಯಲ್ಲ .ಸಾಕ್ಷಿ ಮುಂದುವರೆದು ವಾದಿ ಯಾರು ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ತಂದೆಯ ಹೆಸರು ರಾಮಲಿಂಗಣ್ಣ, ಸರ್ವೇ ನಂಬರ 47 ನ್ನು ನನ್ನ ತಂದೆ ಬರಗಾಲಕ್ಕಿಂತ ಮುಂಚೆ ಖರೀದಿ ಮಾಡಿದ್ದರು . ಖರೀದಿ ಮಾಡಿದ ದಿನಾಂಕ , ತಿಂಗಳು ಮತ್ತು ವರ್ಷ ಹೇಳಲು ಬರುವುದಿಲ್ಲ. ನನ್ನ ತಂದೆ ಗೌವನಹಳ್ಳಿಯ ಮಾಣೀಕಮ್ಮರವರಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದಾರೆ . ಆ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡೆಸಿದ್ದೇನೆ. ಆ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿ ಹುಲಗೋಳದಲ್ಲಿ ಇದೆ. ದಾವ ಆಸ್ತಿಯ ಚೆಕ್ ಬಂದಿ ಪೂರ್ವಕ್ಕೆ ನಾಲ, ಪಶ್ಚಿಮಕ್ಕೆ ಅಜಪ್ಪ ಕಾಶಪ್ಪ , ಶಿವಕಾಂತಮ್ಮ ಮತ್ತು ನರಸಪ್ಪ , ಉತ್ತರಕ್ಕೆ ನಂದಪ್ಪ ಮತ್ತು ಭೀಮಣ್ಣ ಮತ್ತು ನೀಲಮ್ಮ ಮಹಾದೇವ. ದಕ್ಷೀಣಕ್ಕೆ ಶರಣಪ್ಪ,ಕಾಳಪ್ಪ. ದಾವ ಸ್ವತ್ತಿನ ಯಾವ ದಾಖಲಾತಿಗಳನ್ನು ವಕೀಲರಿಗೆ ನೀಡಿದ್ದೇನೆ ನನಗೆ ಗೊತ್ತು . ನಾನು ನಾಚವಾರ ಗ್ರಾಮದ ಸರ್ವೇ ನಂಬರ 43 ಕ್ಕೆ ಸಂಬಂಧಪಟ್ಟ ನಿಡಿ-1 ರಿಂದ 10 ಮತ್ತು 12 ನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ನನ್ನ ತಂದೆ ಬದುಕಿದ್ದಾಗ ದಾವಾ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿದ್ದರು. ನನ್ನ ತಂದೆಗೆ ನಾನು ಒಬ್ಬಳೇ ಮಗಳು. ದಾವಾ ಆಸ್ತಿ ನನ್ನ ಹೆಸರಿಗೆ ಆಗಿ 37 ವರ್ಷ ಆಗಿದೆ. ಯಾವ ದಾಖಲಾತಿ ಮೂಲಕ ದಾವಾ ಜಮೀನು ನನ್ನ ತಂದೆಯಿಂದ ನನ್ನ ಹೆಸರಿಗೆ ವರ್ಗಾವಣೆ ಆಯಿತು ನನಗೆ ಗೊತ್ತಿಲ್ಲ.

ವಾದಿ ಹೆಂಡತಿ ಮಕ್ಕಳನ್ನು ಕರೆದುಕೊಂಡು ಉಪ ಜೀವನಕ್ಕಾಗಿ ಬೆಂಗಳೂರಿಗೆ ಹೊವೇಗುವಾಗ ದಾವಾ ಆಸ್ತಿಯನ್ನು 20 ವರ್ಷದ ಅವಧಿಗೆ ಬೆಳೆಯಲ್ಲಿ ಭಾಗಕ್ಕೆ ಎಂದು ನಮಗೆ ಕೊಟ್ಟು ಹೋಗಿದ್ದರು ಎಂದರದೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಖರೀದಿ ಮಾಡಿದ್ದರು , ಅದರಂತೆ ನಾವು ಕಬ್ಜಾದಲ್ಲಿದ್ದೇವೆ ಎಂದು ಹೇಳುತ್ತಾರೆ. ವಾದಿ ಬೆಂಗಳೂರಿಗೆ ಹೋದ ನಂತರ ವಾದಿಗೆ ಸೇರಿದ ದಾವಾ ಆಸ್ತಿಯನ್ನು ನನ್ನ ಹೆಸರಿಗೆ

ವರ್ಗಾವಣೆ ಮಾಡಿಕೊಂಡಿದ್ದೇನೆ ಎಂದರ ಸರಿಯಲ್ಲ. ನನ್ನ ತಂದೆ ದಾವಾ ಆಸ್ತಿಯನ್ನು ಖರೀದಿ ಮಾಡಿದ ಖರೀದಿ ಪತ್ರವನುನ ಹಾಜರುಪಡಿಸದೆ ನನ್ನ ಹೆಸರಿಗೆ ಪಹಣಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ರಾಮಲಿಂಗಪ್ಪ ದಾವಾ ಸ್ವತ್ತನುನ ಖರೀದಿ ಮಾಡಿದ ಸಂಗತಿ ಪ್ರತಿವಾದಿಗೆ ಗೊತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನು ಪ್ರತಿವಾದಿಯ ಪ್ರೀತ್ಯಾರ್ಜಿತ ಜಮೀನು ಎಂದರೆ ಸರಿಯಲ್ಲ. ಸರ್ವೇ ನಂಬರ 47 ರ ಪಹಣಿ ಮುಟೇಷನ್ ನನ್ನ ಹೆಸರಲ್ಲಿದೆ . ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸರ್ವೇ ನಂಬರ 47 ರ ಜಮೀನಿಗೆ ನಾನು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ 47 ರಲ್ಲಿಃ ನನಗೆ ಯಾವುದೇ ಹಕ್ಕು ಮತ್ತು ಭಾಗ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ 47 ರಲ್ಲಿನ ಜಮೀನನ್ನು ನನ್ನ ತಂದೆ ಖರೀದಿ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ಖರೀದಿ ಪತ್ರ ಹಾಜರುಪಡಿಸಿಲ್ಲ, ಕಾರಣ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.
ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.